ಇನ್ನೂ ಕಟ್ಟಿ ಹಾಕುತ್ತಿರುವುದು! ಟ್ರೈನಿಂಗ್ ಟೈಮಿನಲ್ಲಿ ಎಷ್ಟು ಸಾರಿ ಒಬ್ಬಳೇ ಓಡಾಡಿಲ್ಲ... ಈಗ ನನ್ನ ಸುಡುತ್ತಿರುವುದು ಏನು... ಭಯವೇ... ಸಂಕಟವೇ?

★★★

ಬ್ಯಾಂಕ್ ಉದ್ಯೋಗಿ ಪಲ್ಲವಿಗೆ ಬಹುರಾಷ್ಟ್ರೀಯ ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ವಿಜಯ್ ಜೊತೆಗೆ ಹಿರಿಯರೇ ನೋಡಿ ಮಾಡಿಸಿದ ಮದುವೆಯಾಗಿತ್ತು. ಮದುವೆ ಆದ ಹೊಸದರಲ್ಲಿ ಒಂದು ವರ್ಷದ ಕಾಲ ವಿಜಯ್ ವಿದೇಶದಲ್ಲಿ ಇದ್ದಾಗ ಅತ್ತೆ ಮಾವನೊಂದಿಗೆ ಪಲ್ಲವಿ ಹೊಂದಿಕೊಂಡು ಇದ್ದಳು. ವಿಜಯ್ ವಾಪಸು ಬಂದೊಡನೆ ಬೆಂಗಳೂರಿನ ಯಲಹಂಕದಲ್ಲೊಂದು ಸುಂದರ ಮನೆ ಖರೀದಿಸಿ ಹೊಸ ಸಂಸಾರ ಹೂಡಿದ್ದರು. ಜೋಡಿ ಹಕ್ಕಿಗಳಂತೆ ಸುತ್ತುತ್ತಾ ಇಬ್ಬರೂ ಹಂಚಿಕೊಂಡ ಖುಷಿಯ ಗಳಿಗೆಗಳ ಫಲವಾಗಿ ಮೂರನೇ ವರ್ಷಕ್ಕೆ ಪವಿತ್ರ ಹುಟ್ಟಿದ್ದಳು. ವಾರಕ್ಕೊಮ್ಮೆ ಸುತ್ತಾಟ, ಶಾಪಿಂಗ್, ವರ್ಷಕ್ಕೊಮ್ಮೆ, ಹತ್ತಿರವಿದ್ರೆ ಎರಡು ಬಾರಿ ಪ್ರವಾಸ ಮಾಮೂಲಾಗಿ ಬಿಟ್ಟಿತ್ತು. ಹತ್ತು ವರ್ಷಗಳೂ ಕಳೆದು ಹೋದಾಗ ಪಲ್ಲವಿಗೂ ಬದುಕು ಮಾಯೆಯಂತೆ ಸುಂದರವಾಗಿ ಕಂಡಿತ್ತು. ಖುಷಿ ಆಗಲೇ ಮಗ್ಗುಲು ಬದಲಾಯಿಸುವ ಲಕ್ಷಣ ತೋರಿತ್ತೋ ಏನೋ! ದಾಂಪತ್ಯದ ಬಿಸುಪು ಕಮ್ಮಿಯಾಗುತ್ತಿದೆ ಎಂದು ಪಲ್ಲವಿಗೆ ಅನಿಸತೊಡಗಿತ್ತು. ವಿಜ್ಜು ಕೈಯಲ್ಲಿ ಅರಳುವಾಗ ಅವನು ಉಸುರುತ್ತಿದ್ದ 'ಪಲ್ಲು, ಪಲ್ಲು' ಉನ್ಮಾದದ ಪಿಸುಗುಟ್ಟುವಿಕೆ ಮಾಯವಾಗಿ ಮರು

